# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಕೆ.ಆರ್.ನಗರ.

ಸಿ.ಸಿ. ನಂ. 408/2017

ಪಿರ್ಯಾದುದಾರರುಃ ಸರ್ಕಾರದ ಪರವಾಗಿ ಸಾಲಿಗ್ರಾಮ ಪೋಲೀಸರು

ವಿರುದ್ಧ

ಆರೋಪಿ: ಸಿದ್ದೇಗೌಡ ಬಿನ್ ಗೋಪಾಲೇಗೌಡ, 48 ವರ್ಷ, ಜಾನಿರಾಣಿ ಲಕ್ಷ್ಮಿಬಾಯಿ ರಸ್ತೆ, ಮಿರ್ಲೆ ಗ್ರಾಮ ಕೆ.ಆರ್.ನಗರ ತಾಲ್ಲೂಕು.

## ದೋಷಾರೋಪಣೆ

ಶ್ರೀ. ಶ್ರೀನಾಥ್ ಕೆ. ಬಿ.ಎ.ಎಲ್. ಎಲ್‌ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ, ಕೆ.ಆರ್.ನಗರ ಆದ ನಾನು ಆರೋಪಿಯಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 19-04-2016 ರಂದು ಸಂಜೆ 4 ಗಂಟೆ ಸಮಯಲ್ಲಿ ಸಾಲಿಗ್ರಾಮ ಪೋಲೀಸ್ ಠಾಣಾ ಸರಹದ್ದು ಈ ನ್ಯಾಯಾಲಯದ ವ್ಯಾಪ್ತಿಗೊಳಪಡುವ ಮಿರ್ಲೆ ಗ್ರಾಮದ ವಾಸಿ ವೇದಾವತಿ ಕೋಂ ಸುರೇಶರವರಿಗೆ ಸೇರಿದ ವಾಸದ ಮನೆಯ ಬಳಿ ಆರೋಪಿಯಾದ ನೀವು ಚಾಸಾ-1 ರವರ ಜಮೀನಿನಲ್ಲಿದ್ದ ಮರಗಳನ್ನು ಮಾರುವ ವಿಚಾರದಲ್ಲಿ ಹಳೆ ದ್ವೇಷವನ್ನು ಇಟ್ಟುಕೊಂಡು ಚಾಸಾ-1 ರವರು ಅವರ ಅತ್ತೆಯ ಮನೆಯಲ್ಲಿದ್ದಾಗ ನೀವು ಏಕಾಏಕಿ ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿದ್ದು ನೀವು ಭಾ.ದಂ.ಸಂ. ಕಲಂ 448 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರಿಗೆ ಬಾಯಿಗೆ ಬಂದಂತೆ ಬೋಳಿಮಗನೆ, ಸೂಳೆಮಗನೆ, ಹೆಂಡ್ತಿ, ಅವ್ವ ಎಂಬಿತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು ನೀವು ಭಾ.ದಂ.ಸಂ. ಕಲಂ 504 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರ ಮುಖದ ಬಲಭಾಗಕ್ಕೆ ಹಗ್ಗದಿಂದ ಹೊಡೆದು, ಅಲ್ಲೇ ಬಿದ್ದಿದ್ದ ಮಚ್ಚನ್ನು ತೆಗೆದುಕೊಂಡು ಅದರ ಹಿಂಭಾಗದಿಂದ ಚಾಸಾ-1 ರವರ ಎಡಕಾಲಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು ನೀವು ಭಾ.ದಂ.ಸಂ. ಕಲಂ 324 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ ಕೊಲೆ ಮಾಡದೇ ಬಿಡುವುದಿಲ್ಲವೆಂದು ಹೇಳಿ ಕೊಲೆ ಬೆದರಿಕೆ ಹಾಕಿದ್ದು ನೀವು ಭಾ.ದಂ.ಸಂ. ಕಲಂ 506 ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿದ್ದೀರೆಂದು ನಿಮ್ಮ ಮೇಲೆ ಆರೋಪವಿದೆ.

ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೊಳಪಡುತ್ತೀರಿ.

ಪ್ರಶ್ನೆ1ಃ ನಿಮಗೆ ಈಗ ಓದಿ ಹೇಳಿದ ನಿಮ್ಮ ಮೇಲಿನ ಆರೋಪಗಳನ್ನು ಕೇಳಿಸಿಕೊಂಡಿರಾ? ತಿಳಿಯಿತೇ?

ಉತ್ತರ ಃ

ಪ್ರಶ್ನೆ2ಃ ಮೇಲ್ಕಂಡ ಆರೋಪಗಳನ್ನು ನೀವು ಒಪ್ಪಿಕೊಳ್ಳುತ್ತೀರೋ? ವಿಚಾರಣೆಯಾಗೇಕೋ?

ಉತ್ತರ ಃ

ಕೆ.ಆರ್.ನಗರ,

ದಿನಾಂಕಃ **28-07-2018**

(ಶ್ರೀನಾಥ್ ಕೆ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ, ಕೆ.ಆರ್.ನಗರ.